**ಸಾಕ್ಷಿಗೆ ದಿನಾಂಕಃ08-07-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. BPR ವಕೀಲರಿಂದ ::**

ನಾನು ತರೀಕೆರೆಯ ಜೂನಿಯರ್ ಕಾಲೇಜಿನಲ್ಲಿ ಪಿ ಯು ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಆ ರೀತಿ ಯಾವ ವರ್ಷದಲ್ಲಿ ಪಿ ಯು ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ವಾದಿ ಹಾಗೂ ಪ್ರತಿವಾದಿಗಳು ನಮ್ಮ ಸಮಾಜಕ್ಕೆ ಸೇರಿದ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸರಿ. ಸದರಿಯವರು ನಮ್ಮ ಕಾರ್ಯಕ್ರಮಗಳಿಗೆ ಬರುವುದು ಹಾಗೂ ನಾವು ಅವರ ಕಾರ್ಯಕ್ರಮಗಳಿಗೆ ಹೋಗುವುದು ಮಾಡುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿ ರವರ ಕುಟುಂಬದ ಕಾರ್ಯಕ್ರಮಗಳಿಗೆ ನಾನು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ವಾದಿ ಗಂಗಾಧರಪ್ಪ ರವರ ಹೆಂಡತಿಯಾಗಿದ್ದು 2 ನೇ ವಾದಿ ಗಂಗಾಧರಪ್ಪ ರವರ ಮಗಳಾಗಿರುತ್ತಾಳೆ ಎಂದರೆ ಸರಿ. 2 ನೇ ವಾದಿಯು ಜೀವನೋಪಾಯಕ್ಕೆ ನಮ್ಮ ಗ್ರಾಮದ ಅಂಗನವಾಡಿಯಲ್ಲಿ ಅಡುಗೆ ಸಹಾಯಕರಾಗಿ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಕಂದಾಯ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ.

ಸಿದ್ದಪ್ಪ ಬಿನ್ ಗಿರಿಯಪ್ಪ ರವರು ರೇವಣಸಿದ್ದಪ್ಪ ರವರ ತಂದೆಯಾಗಿರುತ್ತಾರೆ ಎಂದರೆ ಸರಿ. ರೇವಣಸಿದ್ದಪ್ಪ ರವರಿಗೆ ಬಸಮ್ಮ ಮತ್ತು ಗಂಗಾಧರಪ್ಪ ಎನ್ನುವ ಸಹೋದರರು ಇದ್ದರು ಎಂದರೆ ಸರಿ. ಸದರಿ ಬಸಮ್ಮ ರವರನ್ನು ಬೆಟ್ಟದಹಳ್ಳಿ ಗ್ರಾಮದವರಿಗೆ ಕೊಟ್ಟು ಮದುವೆ ಮಾಡಲಾಗಿರುತ್ತದೆ ಎಂದರೆ ಸರಿ. ಸಿದ್ದಪ್ಪ ರವರು ನನಗೆ ಬುದ್ದಿ ಬರುವ ಪೂರ್ವದಲ್ಲಿ ಮರಣ ಹೊಂದಿರುತ್ತಾರೆ. ರೇವಣಸಿದ್ದಪ್ಪ ರವರು ಗಂಗಾಧರಪ್ಪ ರವರಿಗಿಂತ ಸುಮಾರು 5-6 ವರ್ಷ ದೊಡ್ಡವರು ಇರುಬಹುದು, ನಿಖರವಾಗಿ ಗೊತ್ತಿಲ್ಲ. ರೇವಣಸಿದ್ದಪ್ಪ ರವರು ಈಗ ಮೃತರಾಗಿರುತ್ತಾರೆ ಎಂದರೆ ಸರಿ. ಸುಮಾರು 20 ವರ್ಷಗಳ ಹಿಂದೆ ಮೃತರಾಗಿರಬಹುದು, ನಿಖರವಾಗಿ ಗೊತ್ತಿಲ್ಲ. ಸಿದ್ದಪ್ಪ ರವರು ಮೃತರಾದ ನಂತರದಲ್ಲಿ ಅವರ ಕುಟುಂಬದ ವ್ಯವಹಾರಗಳನ್ನು ಅವರ ಹಿರಿಯ ಮಗ ರೇವಣಸಿದ್ದಪ್ಪ ರವರು ಮುಂದುವರೆಸಿಕೊಂಡು ಹೋಗಿರುತ್ತಾರೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ.

ಕೋರನಹಳ್ಳಿ ಗ್ರಾಮದ ಸರ್ವೇ ನಂಬರ್ 78 ರ 1968-69 ರಿಂದ 1980-81 ರವರೆಗಿನ ಎಲ್ಲಾ ಪಹಣಿಗಳಲ್ಲಾ ಅನುಬೋಗದರರರು ಕಾಲಂ ನಲ್ಲಿ

ರೇವಣಸಿದ್ದಪ್ಪ ರವರ ಹೆಸರು ಕಂಡು ಬಂದಿದ್ದು, ಕಾಲಂ ನಂ.9 ರಲ್ಲಿ ಸಿದ್ದಪ್ಪ ಬಿನ್ ಗಿರಿಯಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಸದರಿ ಪಹಣಿಗಳ ದೃಡೀಕೃತ ನಕಲುಗಳನ್ನು ತೋರಿಸಲಾಗಿ ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಕ್ರಮವಾಗಿ ನಿಪಿ9 ರಿಂದ 11 ಎಂದು ಗುರುತಿಸಲಾಯಿತು. 1987 ರಿಂದ 1991 ಸಾಲಿನವರೆಗೂ ಸದರಿ ಸರ್ವೇ ನಂಬರ್ ನ ಪಹಣಿಗಳಲ್ಲಿ ಓಂಕಾರಪ್ಪ ಬಿನ್ ರೇವಣಸಿದ್ದಪ್ಪ ರವರ ಹೆಸರನ್ನು ಪೌತಿ ಮೇರೆಗೆ ದಾಖಲಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲಾತಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ12 ರಿಂದ 14 ಎಂದು ಗುರುತಿಸಲಾಯಿತು.

1957-58 ರಿಂದ 1966-67 ರವರೆಗೆ ಸರ್ವೇ ನಂಬರ್ 78 ರ ಪಹಣಿಗಳಲ್ಲಿ ಸದರಿ ಸ್ವತ್ತಿನ ಹಿಡುವಳಿದಾರರ ಹೆಸರು ಸಿದ್ದಪ್ಪ ಬಿನ್ ಗಿರಿಯಪ್ಪ ಎಂದುಕಂಡು ಬರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲಾತಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ15 ರಿಂದ 20 ಎಂದು ಗುರುತಿಸಲಾಯಿತು. ಸರ್ವೇ ನಂಬರ್ 78 ನ್ನು ರುದಪ್ಪ ರವರಿಗೆ ಮಾರಾಟ ಮಾಡುವವರೆಗೂ ಸದರಿ ಸ್ವತ್ತು ಸಿದ್ದಪ್ಪ ಬಿನ್ ಗಿರಿಯಪ್ಪ ರವರು ಒಟ್ಟು ಕುಟುಂಬದ ಸ್ವತ್ತು ಆಗಿತ್ತು ಎಂದರೆ ಸಾಕ್ಷಿಯು ಸದರಿಯವರ ಕುಟುಂಬದಲ್ಲಿ ವಿಭಾಗ ಆಗಿತ್ತು ಎಂದು ನುಡಿದಿರುತ್ತಾರೆ. ಸದರಿಯವರ ಕುಟುಂಬದಲ್ಲಿ ಯಾವ ಸಮಯದಲ್ಲಿ ವಿಭಾಗ ಆಗಿತ್ತು ಎಂದರೆ ನನಗೆ ಈಗ ನೆನಪಿಲ್ಲ. ಇಲ್ಲಿಯವರೆಗೂ ಸಿದ್ದಪ್ಪ ಬಿನ್ ಗಿರಿಯಪ್ಪ ರವರ ಕುಟುಂಬದಲ್ಲಿ ಅವರ ಕುಟುಂಬದ ಆಸ್ತಿಗೆ ಸಂಬಂಧಪಟ್ಟಂತೆ ವಿಭಾಗ ಆಗಿರುವುದಿಲ್ಲ ಮತ್ತು ದಾವಾ ಶೆಡ್ಯೂಲ್ ಸ್ವತ್ತುಗಳು ಇಲ್ಲಿಯವರೆಗೂ ಅವರ ಒಟ್ಟು ಕುಟುಂಬದ ಸ್ವತ್ತಾಗಿ ಉಳಿದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಐಟಂ 1 ಮತ್ತು 2 ರವರ ಸ್ವತ್ತು ರೇವಣಸಿದ್ದಪ್ಪ ರವರಿಗೆ ಗೇಣಿದಾರರ ಮುಖಾಂತರ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ಗಂಗಾಧರಪ್ಪ ರವರನ್ನು ನಾನು ನೋಡದೇ ಸುಮಾರು ವರ್ಷಗಳು ಆಗಿದ್ದು ಅವರು ಜೀವಂತವಾಗಿ ಇರುತ್ತಾರೋ ಅಥವಾ ಮೃತರಾಗಿರುತ್ತಾರೋ ಎಂದು ನನಗೆ ಗೊತ್ತಿಲ್ಲ. ಸದರಿಯವರು ನಮ್ಮ ಊರಿಗೆ ಬಂದು 30-40 ವರ್ಷಗಳಾಗಿರಬಹುದು ಎಂದರೆ ಸರಿ. ರೇವಣಸಿದ್ದಪ್ಪ ರವರು ಅವರ ಕುಟುಂಬದ ಮುಖ್ಯಸ್ದರಾಗಿದ್ದ ಕಾರಣ ಒಟ್ಟು ಕುಟುಂಬದ ಪರವಾಗಿ ದಾವಾ ಐಟಂ 1 ಮತ್ತು 2 ರ ಮಂಜೂರಾತಿಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಓಂಕಾರಪ್ಪ ರವರು ದಾವಾ ಐಟಂ 3 ನ್ನು ದಾವಾ ಐಟಂ 1 ಮತ್ತು 2 ರಿಂದ ಬಂದ ಆದಾಯದಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಓಂಕಾರಪ್ಪ ರವರು ವ್ಯವಸಾಯ ಬಿಟ್ಟು ಬೇರೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ದಾವಾ ಐಟಂ 1 ರಿಂದ 3 ಅಡಿಕೆ ತೋಟ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಓಂಕಾರಪ್ಪ ರವರು ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಐಟಂ 1 ರಿಂದ 3 ಅಡಿಕೆ ತೋಟಗಳು 15-20 ವರ್ಷದ ಹಳೆಯ ಅಡಿಕೆ ತೋಟ ಆಗಿರುತ್ತದೆ. 1 ಎಕರೆ ಅಡಿಕೆ ತೋಟಕ್ಕೆ 5 ಕ್ವಿಂಟಾಲ್ ಒಣ ಅಡಿಕೆ ಸಿಗಬಹುದು. ದಾವಾ ಐಟಂ 1 ರಿಂದ 3 ರಿಂದ ಓಂಕಾರಪ್ಪ ರವರಿಗೆ ವಾರ್ಷಿಕ 25 ಕ್ವಿಂಟಾಲ್ ಅಡಿಕೆ ಸಿಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಿಂದ ಓಂಕಾರಪ್ಪ ರವರಿಗೆ ವಾರ್ಷಿಕ 25 ಲಕ್ಷ ಆದಾಯ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ 1 ರಿಂದ 3 ರಲ್ಲಿ ಎಷ್ಟು ಅಡಿಕೆ ಮರಗಳು ಇರುತ್ತದೆ ಎಂದು ನನಗೆ ಗೊತ್ತಿಲ್ಲ.

ದಾವಾ ಐಟಂ 4 ರಿಂದ 7 ಸ್ವತ್ತುಗಳನ್ನು 4 ನೇ ಪ್ರತಿವಾದಿಯ ತಂದೆಗೆ ಹಣ ತೆಗೆದುಕೊಂಡು ಬಿಟ್ಟು ಕೊಟ್ಟಿರುವುದಾಗಿ ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ತಿಳಿಸಿದ್ದು ಸದರಿ ವಿಚಾರದ ಬಗ್ಗೆ ನಾನು ಕೇವಲ ಕೇಳಿ ತಿಳಿದುಕೊಂಡಿರುತ್ತೇನೆ. ಅದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತುಗಳು ದಾವೆಯ ಪಕ್ಷಗಾರರ ಒಟ್ಟು ಕುಟುಂಬದ ಸ್ವತ್ತಾಗಿದ್ದು ವಾದಿಗಳಿಗೆ ಅದರಲ್ಲಿ ಕಾನೂನು ಬದ್ದ ಹಿಸ್ಸೆ ಇರುತ್ತದೆ ಎಂದರೆ ಸರಿಯಲ್ಲ. ಇಲ್ಲಿಯವರೆಗೂ ದಾವಾ ಶೆಡ್ಯೂಲ್ ಸ್ವತ್ತಿನ ಒಟ್ಟು ಕುಟುಂಬದ ಆದಾಯವನ್ನು ಓಂಕಾರಪ್ಪ ರವರೇ ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: